ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 4
Total No. of Questions : 26 ] [ Total No. of Printed Pages : 4

**ಸಂಕೇತ ಸಂಖ್ಯೆ : 104-K (NS)**

**Code No. : 104-K (NS)**

# ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ.)
# ಪ್ರಥಮ ಭಾಷೆ – ಕನ್ನಡ
# FACILITATING LEARNING ( LPS )
# FIRST LANGUAGE — KANNADA

**(ಹೊಸ ಪಠ್ಯವಸ್ತು)**

**( New Syllabus )**

ದಿನಾಂಕ : 01. 07. 2015 ]
Date : 01. 07. 2015 ]

ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 60
Time : 10.00 A.M. to 1.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate*

***ಸೂಚನೆಗಳು :*** i) ಪ್ರತಿ ಉತ್ತರವನ್ನು ಚಿಂತನೆ ಮಾಡಿ, ಸಂಘಟಿಸಿ ಬರೆಯಲು ಅನುಕೂಲವಾಗಬೇಕೆಂದು ಈ ಪತ್ರಿಕೆಗೆ ಉತ್ತರಿಸಲು 3 ಗಂಟೆಗಳ ಕಾಲಾವಕಾಶ ನೀಡಿದೆ.

ii) ಪ್ರತಿ ಪ್ರಶ್ನೆಗೂ ಸೂಚಿಸಿದಷ್ಟು ಉತ್ತರ ಮಾತ್ರ ಬರೆಯಿರಿ.

## ಭಾಗ – I

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ : $10 \times 1 = 10$

1. ಮಕ್ಕಳಿಗೆ ಭಾಷೆಯ ಜೀವಂತಿಕೆ ತಟ್ಟುವುದು ಈ ಸಂದರ್ಭಗಳಲ್ಲಿ

   (I) ಸಮಗ್ರವಾಗಿ ಓದಿ ಅನುಭವಿಸುವುದರಿಂದ

   (II) ಕವಿಯನ್ನು ನೇರವಾಗಿ ಸಂದರ್ಶಿಸಿದಾಗ

   (III) ಹಾಡಿ ಅನುಭವಿಸುವುದರಿಂದ

   (IV) ಯಾಂತ್ರಿಕವಾಗಿ ಒಬ್ಬರಾದ ಮೇಲೊಬ್ಬರು ಸಾಲಾಗಿ ಓದುವುದರಿಂದ

   (A) I ಮತ್ತು II ಸರಿ (B) II ಮತ್ತು III ಸರಿ

   (C) I ಮತ್ತು III ಸರಿ (D) III ಮತ್ತು IV ಸರಿ

2. ಇದನ್ನು ಕನ್ನಡದ ಪ್ರಮಾಣ ಭಾಷೆ ಎಂದು ಪರಿಗಣಿಸಿದೆ

   (A) ಅನೇಕ ಕನ್ನಡಗಳನ್ನೆಲ್ಲಾ ಸಮನ್ವಯಗೊಳಿಸುವ ಗ್ರಾಂಥಿಕ ಕನ್ನಡ

   (B) ಮಗು ಮನೆಯಿಂದ ಕಟ್ಟಿಕೊಂಡು ಬಂದ ಭಾಷೆ

   (C) ಪ್ರಾದೇಶಿಕ ಭಾಷಾ ವೈವಿಧ್ಯತೆಗಳಿಂದ ಕೂಡಿದ ಕನ್ನಡ

   (D) ಕಲಿಕೆಯ ಮಾಧ್ಯಮ

3. ಭಾಷಾ ಶಿಕ್ಷಕರಾಗಿ ನಮ್ಮ ಕೇಂದ್ರ ಗಮನವಿರುವುದು
   (A) ಕನ್ನಡ ಮಾತನಾಡುವುದನ್ನು ಕಡ್ಡಾಯಗೊಳಿಸುವುದು
   (B) ತರಗತಿಯಲ್ಲಿ ವೈವಿಧ್ಯಮಯ ಸಂಪನ್ಮೂಲಗಳನ್ನು ಒದಗಿಸಿಕೊಡುವುದು
   (C) ಮಕ್ಕಳ ಪರೀಕ್ಷೆಯಲ್ಲಿ ಚೆನ್ನಾಗಿ ಉತ್ತರಿಸುವಂತೆ ಮಾಡುವುದು
   (D) ಮಕ್ಕಳನ್ನು ಸಾಹಿತಿಗಳನ್ನಾಗಿ ರೂಪುಗೊಳಿಸುವುದು

4. ಶಾಲೆಯಲ್ಲಿ ಭಾಷಾ ಕಲಿಕೆ ಹೀಗೆ ಆರಂಭಿಸುವುದು ಅಪೇಕ್ಷಣೀಯ
   (A) ವ್ಯಾಕರಣ ಪರಿಚಯ ಮಾಡುವುದರ ಮೂಲಕ
   (B) ಬರವಣಿಗೆಯಿಂದಲೇ ಆರಂಭಿಸುವುದು
   (C) ಅವರವರ ಮನೆಭಾಷೆಯಿಂದಲೇ ಆರಂಭಿಸುವುದು
   (D) ಗ್ರಾಂಥಿಕ ಭಾಷೆಯಿಂದಲೇ ಆರಂಭಿಸುವುದು

5. ಕಲಿಕೆಯ ಮಾಧ್ಯಮದ ಆಯ್ಕೆ ಮಾಡಿಕೊಳ್ಳಬೇಕಾಗಿರುವುದು
   (A) ವಿವೇಕದಿಂದ
   (B) ಪ್ರತಿಷ್ಠೆಯ ದೃಷ್ಟಿಯಿಂದ
   (C) ಸ್ನೇಹಿತರ ಆಯ್ಕೆ ಅನುಸರಿಸಿಕೊಂಡು
   (D) ಹಿರಿಯರ ಒತ್ತಾಯಕ್ಕನುಗುಣವಾಗಿ

6. ಈ ಕೆಳಗೆ ನೀಡಿರುವ ಯಾವ ಹೇಳಿಕೆಯು ಸಮಂಜಸವಾದ ಹೇಳಿಕೆಯಲ್ಲ ?
   (A) ಮಗು ತನ್ನ ವಯಸ್ಸಿನ ಇತರ ಮಕ್ಕಳೊಡನೆ ಸಂವಹನ ನಡೆಸಲು ಹೆಚ್ಚು ಅವಕಾಶ ನೀಡುವುದು
   (B) ಮಗು ಶಿಕ್ಷಕರೊಡನೆ ಮತ್ತು ಇತರ ಹಿರಿಯರೊಡನೆ ಸಂವಹನ ನಡೆಸಲು ಪ್ರೇರಣೆ ನೀಡುವುದು
   (C) ಮಗು ಶಾಲೆಗೆ ದಾಖಲಾದೊಡನೆಯೇ ಮನೆಭಾಷೆಯ ಬಳಕೆ ನಿಲ್ಲಿಸಲು ಸೂಚಿಸುವುದು
   (D) ಶಾಲೆಯ ಕುರಿತಂತೆ ಮನೆಯಲ್ಲಿ, ಮನೆ ಕುರಿತಂತೆ ಶಾಲೆಯಲ್ಲಿ ಮಾತನಾಡಲು ಅವಕಾಶ ಕಲ್ಪಿಸಿಕೊಡುವುದು

7. ಹುಡುಗಾಟ ಹುಡುಕಾಟವಾಗುವುದು
   (A) ಗೆಲುವು ಸಾಧಿಸಿದಾಗ
   (B) ಹುಡುಗಾಟಕ್ಕೊಂದು ನಿರ್ಧಿಷ್ಟ ಗುರಿ ಪ್ರಾಪ್ತವಾದಾಗ
   (C) ಸಹಜವಾದ ವರ್ತನೆಯಿಂದ
   (D) ಕಲಿಕೆ ಆಟವಾಗಿ ಪರಿವರ್ತನೆಯಾದಾಗ

8. ಓದುವುದರಲ್ಲಿ ತೊಂದರೆ ಇರುವ, ಆದರೆ ಬಹಳ ವೇಗವಾಗಿ ಎಲ್ಲವನ್ನೂ ಅರ್ಥೈಸಿಕೊಳ್ಳುವ ಸಾಮರ್ಥ್ಯವಿರುವ ಮಕ್ಕಳಿಗೆ ಕಲಿಕೆಯನ್ನು ಹೀಗೆ ಅನುಕೂಲಿಸಿಕೊಡಬೇಕು
   (A) ಅವರಿಂದ ಉದ್ದುದ್ದವಾದ ಲೇಖನಗಳನ್ನು ಓದಿಸುವುದು
   (B) ಅವರ ಜ್ಞಾನಾತ್ಮಕ ಮಟ್ಟಕ್ಕಿಂತ ಕಡಿಮೆ ಇರುವ ಪಠ್ಯವನ್ನು ಓದಲು ನೀಡುವುದು
   (C) ಅವರ ಜ್ಞಾನಾತ್ಮಕ ಮಟ್ಟಕ್ಕಿಂತ ಹೆಚ್ಚು ಇರುವ ಪಠ್ಯವನ್ನು ಓದಲು ನೀಡುವುದು
   (D) ಪಾಠ ಓದಿದ್ದನ್ನು ಮೊಬೈಲ್‌ನಲ್ಲಿ ಧ್ವನಿಮುದ್ರಣ ಮಾಡಿ ಅವರು ಅದನ್ನು ಕೇಳಿಸಕೊಳ್ಳುತ್ತಾ ಓದುವಂತೆ ಮಾಡುವುದು.

9. ಒಳಗೊಳ್ಳುವ ಭಾಷಾ ತರಗತಿಗಳಲ್ಲಿ ಮೌಲ್ಯಮಾಪನ ಮಾಡುವಾಗ ಗಮನಿಸಲೇಬೇಕಾದ ಮುಖ್ಯ ಅಂಶ
   (A) ಎಲ್ಲಾ ರೀತಿಯ ಕಲಿಕಾದಾರರಿಗೂ ಪ್ರಸ್ತುತವಾಗುವ ಕಲಿಕಾ ಸೂಚಕಗಳನ್ನು ಗುರುತಿಸುವುದು
   (B) ಎಲ್ಲರನ್ನೂ ಒಂದೇ ಮಾನದಂಡದಿಂದ ನೋಡುವುದು
   (C) ಭಿನ್ನ ಸಾಮರ್ಥ್ಯಗಳಿರುವ ಮಕ್ಕಳಿಗೆ ಮೌಲ್ಯಮಾಪನ ಮಾಡದೇ ಇರುವುದು
   (D) ಮೌಖಿಕ ಹಾಗೂ ಬರವಣಿಗೆ ರೂಪದಲ್ಲಿ ಮೌಲ್ಯಮಾಪನ ಮಾಡುವುದು

10. ಕಥೆಗಳನ್ನು ಹೇಳಬೇಕೇ ಅಥವಾ ಮಕ್ಕಳಿಂದ ಓದಿಸಬೇಕೇ ಎನ್ನುವುದನ್ನು ನಿರ್ಧರಿಸುವ ಅಂಶ
   (A) ಕಥೆಯಲ್ಲಿನ ಪಾತ್ರಗಳ ಸಂಖ್ಯೆ
   (B) ಕಥೆಯ ನಿರೂಪಣೆ
   (C) ಕಥೆಯ ವಿಶ್ಲೇಷಣೆ
   (D) ಕಥೆಯಲ್ಲಿ ಯಾವ ಕೌಶಲ ಬೆಳಸಲು ಬಳಸುತ್ತೇವೆ ಎನ್ನುವುದು

## ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ **ಐದು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : $5 \times 2 = 10$

11. ಶಿವರಾಮ ಕಾರಂತರು 'ಅಭಿರುಚಿ' ಬೆಳಸುವ ಮಹತ್ತ್ವವನ್ನು ಹೇಗೆ ಅರ್ಥೈಸಿದ್ದಾರೆ ?
12. 'ಮಕ್ಕಳಿಗೆ ಭಾಷೆಯನ್ನು ಕಲಿಸುವುದಕ್ಕಿಂತ ಹೆಚ್ಚಾಗಿ ಮಕ್ಕಳಲ್ಲಿ ಭಾಷೆಯನ್ನು ಬೆಳಸಬೇಕು' ಏಕೆ ?
13. ಓದುವ ಕೌಶಲವನ್ನು ಕಲಿಕಾದಾರರಲ್ಲಿ ಸಮೃದ್ಧಿಗೊಳಿಸಲು ನೀಡಬಹುದಾದ ನಾಲ್ಕು ಚಟುವಟಿಕೆಗಳನ್ನು ತಿಳಿಸಿ.
14. ಭಾಷಾ ಕಲಿಕೆಯನ್ನು ಅಭಿವೃದ್ಧಿಪಡಿಸಲು ಉಕ್ತಲೇಖನ ಚಟುವಟಿಕೆಯಲ್ಲಿ ಹೇಗೆ ಮಾರ್ಪಾಡು ಮಾಡಿಕೊಳ್ಳುವಿರಿ ?
15. ಭಾಷಾ ತರಗತಿಯಲ್ಲಿ ಪರಾಮರ್ಶನ ಸಂಪನ್ಮೂಲಗಳನ್ನು ಹೇಗೆ ಲಭ್ಯಗೊಳಿಸುವಿರಿ ?
16. 'ಮೌಖಿಕ ಅಭಿವ್ಯಕ್ತಿಗೂ ಮತ್ತು ಸಾಕ್ಷರತೆಗೂ ಗಾಢ ಸಂಬಂಧವಿದೆ' ಹೇಗೆ ಚರ್ಚಿಸಿ.
17. ಕಲಿಕಾದಾರರ ಸಾಕ್ಷರತೆಯ ಹಾದಿ ಉತ್ತಮಗೊಳ್ಳಬೇಕಾದರೆ ಸಿದ್ದಿಸಿಕೊಳ್ಳಲೇ ಬೇಕಾದ ಐದು ಅಂಶಗಳಾವುವು ?
18. ಪ್ರತೀ ಕಲಿಕಾ ಸನ್ನಿವೇಶಕ್ಕೂ ಶಿಕ್ಷಕರು ಕೈಗೊಳ್ಳಬೇಕಾದ ಬೋಧನಾ ನಿರ್ಧಾರಗಳನ್ನು ತಿಳಿಸಿ.

## ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಎರಡು ಪುಟಗಳನ್ನು ಮೀರದಂತೆ ಉತ್ತರಿಸಿ : $8 \times 5 = 40$

19. ಅ) ಮನೆಭಾಷೆಯಿಂದ ಶಾಲಾ ಭಾಷೆಗೆ ಬದಲಾಯಿಸಿಕೊಳ್ಳುವ ಪ್ರಕ್ರಿಯೆಯನ್ನು ಹೇಗೆ ಅನುಕೂಲಿಸುವಿರಿ ಎನ್ನುವುದನ್ನು ಉದಾಹರಣೆಯೊಂದಿಗೆ ವಿವರಿಸಿ.

*ಅಥವಾ*

ಆ) ಭಾಷಾ ಕಲಿಕೆಯ ತರಗತಿಗಳಲ್ಲಿ ಚಿಂತನಾಶೀಲತೆ ಬೆಳಸಿಕೊಳ್ಳಲು ಯಾವ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು ಉದಾಹರಣೆಗಳೊಂದಿಗೆ ಚರ್ಚಿಸಿ.

20. ಅ) ಯಾವುದಾದರೂ ಒಂದು ಕಥೆಯನ್ನು ಮಕ್ಕಳಿಂದ ಹೇಳಿಸಲು ಯಾವ ರೀತಿಯ ಪೂರ್ವ ತಯಾರಿಯನ್ನು ಮಾಡಿಕೊಳ್ಳುವಿರಿ ? ತಿಳಿಸಿ.

***ಅಥವಾ***

ಆ) ಈ ಕೆಳಗೆ ನೀಡಿರುವ ಸುಳಿವುಗಳನ್ನು ಆಧರಿಸಿ ಒಂದು ಕಥೆಯನ್ನು ರಚಿಸಿ :

ಒಂದು ಕಾಡು..... ಸುಂದರವಾದ ಕೊಳ..... ಹಣ್ಣಿನ ಮರಗಳು..... ಕೋತಿಗಳ ಗುಂಪು..... ಕೊಕ್ಕರೆ, ಗಿಣಿ, ಪಾರಿವಾಳ,..... ಕೋತಿಗೆ ಹಾರಾಡುವ ಆಸೆ..... ಗಿಣಿಯ ಸ್ನೇಹ..... ಕೃತಕ ರೆಕ್ಕೆಗಳ ಅಳವಡಿಕೆ..... ತನ್ನ ಗುಂಪಿನಿಂದ ದೂರ..... ಎಲ್ಲರೂ ಹಾರಾಡರು ಸಾಧ್ಯವಿಲ್ಲ..... ಮರಳಿ ಕಾಡಿಗೆ..... ಮರಳಿ ತನ್ನ ಗುಂಪಿಗೆ..... ಮರದಲ್ಲಿ ಉಯ್ಯಾಲೆ ಆಟ.

21. ಅ) ಓದಿದ ವಿಷಯವನ್ನು ಅರ್ಥೈಸಿಕೊಳ್ಳುತ್ತಿದ್ದಾರಿಯೇ ಎಂಬುದನ್ನು ತಿಳಿಯಬೇಕಾದರೆ, ಆಯೋಜಿಸಿಕೊಳ್ಳಬೇಕಾದ ಚಟುವಟಿಕೆಗಳನ್ನು ವಿಶ್ಲೇಷಿಸಿ.

***ಅಥವಾ***

ಆ) ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಬರವಣಿಗೆ ಕೌಶಲವನ್ನು ಬೆಳೆಸಲು ಬಳಸುವ ಹಂತಗಳನ್ನು ವಿಶ್ಲೇಷಿಸಿ.

22. ಅ) ಭಾಷಾ ತರಗತಿಗಳಲ್ಲಿ ಒಂದು ಮಿಂಚುಪಟ್ಟಿಗಳ ಬಳಕೆ ಕುರಿತು ಚರ್ಚಿಸಿ.

***ಅಥವಾ***

ಆ) 5 E ಮಾದರಿಯಲ್ಲಿ ಒಂದು ಗದ್ಯಪಾಠವನ್ನು ಹೇಗೆ ನಿರ್ವಹಿಸುವಿರಿ ? ಚರ್ಚಿಸಿ.

23. ಅ) ಮಕ್ಕಳ ಭಾಷಾ ಕಲಿಕೆಯಲ್ಲಿ ಅದರ ಸಾಮಾಜಿಕ ಪರಿಸರ ಹೇಗೆ ಪ್ರಭಾವಬೀರುತ್ತದೆ ? ವಿಶ್ಲೇಷಿಸಿ.

***ಅಥವಾ***

ಆ) ಭಾಷಾ ತಂಗತಿಯನ್ನು 'ಸಂಪನ್ಮೂಲಭರಿತ ತರಗತಿ'ಯನ್ನಾಗಿ ಹೇಗೆ ರೂಪಿಸುವಿರಿ ?

24. ಅ) ಭಾಷೆಯಲ್ಲಿ 'ಧ್ವನಿ ಆಟ'ದ ಮಹತ್ತ್ವವನ್ನು ತಿಳಿಸಿ. ಹಾಗೂ ಯಾವುದಾದರೂ ಎರಡು ಧ್ವನಿ ಆಟಗಳನ್ನು ಉದಾಹರಣೆ ಮೂಲಕ ವಿವರಿಸಿ.

***ಅಥವಾ***

ಆ) ಕಲಿಕೆಯ ದೃಷ್ಟಿಯಿಂದ ನಲಿ–ಕಲಿ ಅಳವಡಿಸಿಕೊಂಡಿರುವ ಕಲಿಕಾ ವಿಧಾನ ಕುರಿತು ಚರ್ಚಿಸಿ.

25. ಅ) ಯಾವುದಾದರೂ ಎರಡು ಭಾಷಾ ಕೌಶಲಗಳಲ್ಲಿ ಭಾಷೆಯ ಪ್ರಗತಿಯನ್ನು ದಾಖಲಿಸಲು ಗಮನಿಸಬೇಕಾದ ಅಂಶಗಳನ್ನು ಕುರಿತು ಚರ್ಚಿಸಿ.

***ಅಥವಾ***

ಆ) ಪ್ರಾರಂಭಿಕ ಸಾಕ್ಷರತೆಯನ್ನು ಸಾಧಿಸುವಲ್ಲಿ ಚಿಂತನಾಶೀಲ ಮೌಲ್ಯಮಾಪನದ ಮಹತ್ತ್ವೇನು ? ತಿಳಿಸಿ.

26. ಅ) ಒಳಗೊಳ್ಳುವ ಭಾಷಾ ತರಗತಿಗಳಲ್ಲಿ ಶ್ರವಣದೋಷವಿರುವ ವಿದ್ಯಾರ್ಥಿಗಳಿಗೆ ಯಾವ ರೀತಿಯ ಮಧ್ಯವರ್ತನೆಗಳನ್ನು ಆಯೋಜಿಸಬಹುದು ? ಚರ್ಚಿಸಿ.

***ಅಥವಾ***

ಆ) ಒಳಗೊಳ್ಳುವ ತರಗತಿಯ ಲಕ್ಷಣಗಳನ್ನು ವಿಶ್ಲೇಷಿಸಿ.